ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆಗಳು. ಎ.ಎಸ್.ಪಾಟೀಲ್‌ರವರು ಬಂದಿಲ್ಲ. ಡಾ:ಸಾರ್ವಭೌಮ ಬಗಲಿಯವರು ಬಂದಿಲ್ಲ. ಈಗ ಶಾಸನ ರಚನೆಯನ್ನು ತೆಗೆದುಕೊಳ್ಳೋಣ. ವಿಧೇಯಕಗಳನ್ನು ಮಂಡಿಸೋಣ.

1. ಶಾಸನ ರಚನೆ

ಅ) ವಿಧೇಯಕಗಳ ಮಂಡನೆ

(1) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2011

ಶ್ರೀ ಜಿ.ಕರುಣಾಕರರೆಡ್ಡಿ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, 2011ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು:ಪ್ರಸ್ತಾವನೆಯನ್ನು ಮಂಡಿಸಲಾಯಿತು.
ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2011ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಮಾನ್ಯ ಸಚಿವರು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, 2011ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ – 1)